ವಿಷಯ:- ಹಿರೇಕೆರೂರು ತಾಲ್ಲೂಕು ಕಡೂರು ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ಸ್ಥಾಪನೆ.

4(180)

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಹಿರೇಕೆರೂರು ತಾಲ್ಲೂಕು ಕಡೂರು ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ಸ್ಥಾಪನೆಗೆ ಶಾಸಕರು ಗ್ರಾಮಸ್ಥರು, ಗ್ರಾಮ ಪಂಚಾಯಿತಿ ಅಧ್ಯಕ್ಷರು ಸದಸ್ಯರು ಒತ್ತಾಯಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;
2. ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು;
3. ರಾಜ್ಯದಲ್ಲಿ 1996-97ನೇ ಸಾಲಿನಲ್ಲಿ ಎಷ್ಟು ಪದವಿ ಪೂರ್ವ ಕಾಲೇಜುಗಳನ್ನು ಸ್ಥಾಪಿಸಲಾಗಿದೆ ?(ಅವು ಯಾವುವು ವಿವರ ನೀಡುವುದು).

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

1. ಬಂದಿದೆ.
2. ಸದರಿ ಗ್ರಾಮಕ್ಕೆ ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡುವ ಅವಶ್ಯಕತೆ ಬಗ್ಗೆ 1997-98ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.
3. 1996-97ನೇ ಸಾಲಿನಲ್ಲಿ ರಾಜ್ಯದಲ್ಲಿ 60 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಸ್ಥಾಪಿಸಲಾಗಿದೆ.

(ಕಾಲೇಜುಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

ಅನುಬಂಧ

ರಾಜ್ಯದಲ್ಲಿ 1996-97ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆಗಳನ್ನು ಮೇಲ್ದರ್ಜೆಗೇರಿಸಿ ಮಂಜೂರು ಮಾಡಲಾದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ವಿವರ.

1. ಸರ್ಕಾರಿ ಪ್ರೌಢಶಾಲೆ, ದೇವಲಾಪುರ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ
2. ಸರ್ಕಾರಿ ಪ್ರೌಢಶಾಲೆ, ಮಡಿವಾಳ, ಬೆಂಗಳೂರು ದಕ್ಷಿಣ ಜಿಲ್ಲೆ
3. ಸರ್ಕಾರಿ ಪ್ರೌಢಶಾಲೆ, ದೊಮ್ಮಲೂರು ಬೆಂಗಳೂರು
4. ಸರ್ಕಾರಿ ಪ್ರೌಢಶಾಲೆ, ಚಿಕ್ಕಬಾಣಾವರ, ಬೆಂಗಳೂರು ಉತ್ತರ ಜಿಲ್ಲೆ
5. ಸರ್ಕಾರಿ ಪ್ರೌಢಶಾಲೆ, ಜಂಗಮಕೋಟೆ, ಶಿಡ್ಲಘಟ್ಟ ತಾಲ್ಲೂಕು, ಕೋಲಾರ ಜಿಲ್ಲೆ
6. ಸರ್ಕಾರಿ ಪ್ರೌಢಶಾಲೆ, ರಾಯಲಪಾಡು, ಶ್ರೀನಿವಾಸಪುರ ತಾ. ಕೋಲಾರ ಜಿಲ್ಲೆ
7. ಸರ್ಕಾರಿ ಪ್ರೌಢಶಾಲೆ, ಶಿರಾ, ತುಮಕೂರು ಜಿಲ್ಲೆ

8. ಸರ್ಕಾರಿ ಪ್ರೌಢಶಾಲೆ, ಹೊಳೆಸಿರಿಗೆರೆ, ಹರಿಹರ ತಾ. ಚಿತ್ರದುರ್ಗ ಜಿಲ್ಲೆ
9. ಸರ್ಕಾರಿ ಪ್ರೌಢಶಾಲೆ, ಬೇಗೂರು, ಗುಂಡ್ಲುಪೇಟೆ, ಮೈಸೂರು ಜಿಲ್ಲೆ
10. ಸರ್ಕಾರಿ ಪ್ರೌಢಶಾಲೆ, ಮೂಗೂರು, ಮೈಸೂರು ಜಿಲ್ಲೆ
11. ಸರ್ಕಾರಿ ಪ್ರೌಢಶಾಲೆ, ದೊಡ್ಡಕವಲಂದೆ, ನಂಜನಗೂಡು ತಾ. ಮೈಸೂರು ಜಿಲ್ಲೆ
12. ಸರ್ಕಾರಿ ಪ್ರೌಢಶಾಲೆ, ಶುಂಠಿಕೊಪ್ಪ, ಸೋಮವಾರಪೇಟೆ ತಾ. ಕೊಡಗು ಜಿಲ್ಲೆ
13. ಸರ್ಕಾರಿ ಪ್ರೌಢಶಾಲೆ, ಸಿಂಧುಘಟ್ಟ, ಕೆ.ಆರ್. ಪೇಟೆ, ಮಂಡ್ಯ ಜಿಲ್ಲೆ
14. ಸರ್ಕಾರಿ ಪ್ರೌಢಶಾಲೆ, ಅಣ್ಣೂರು, ಮದ್ದೂರು ತಾ. ಮಂಡ್ಯ ಜಿಲ್ಲೆ
15. ಸರ್ಕಾರಿ ಪ್ರೌಢಶಾಲೆ, ಬೆಟ್ಟಂಪಾಡಿ, ಪುತ್ತೂರು ತಾ. ದಕ್ಷಿಣ ಕನ್ನಡ ಜಿಲ್ಲೆ
16. ಸರ್ಕಾರಿ ಪ್ರೌಢಶಾಲೆ, ಕೆಮ್ಮಾಲ್, ಮಂಗಳೂರು ತಾ. ದಕ್ಷಿಣ ಕನ್ನಡ ಜಿಲ್ಲೆ
17. ಸರ್ಕಾರಿ ಪ್ರೌಢಶಾಲೆ, ಬೊಕ್ಕಪಟ್ಟಣ, ಮಂಗಳೂರು
18. ಸರ್ಕಾರಿ ಪ್ರೌಢಶಾಲೆ, ಲಿಂಗದಹಳ್ಳಿ, ತರಿಕೆರೆ ತಾ. ಚಿಕ್ಕಮಗಳೂರು ಜಿಲ್ಲೆ
19. ಸರ್ಕಾರಿ ಪ್ರೌಢಶಾಲೆ, ಮುತ್ತಿನಕೊಪ್ಪ, ನರಸಿಂಹರಾಜಪುರ ತಾ. ಚಿಕ್ಕಮಗಳೂರು ಜಿಲ್ಲೆ
20. ಸರ್ಕಾರಿ ಪ್ರೌಢಶಾಲೆ, ಕೈಯ್ಯೂರು, ಪುತ್ತೂರು ತಾ. ದಕ್ಷಿಣ ಕನ್ನಡ ಜಿಲ್ಲೆ
21. ಸರ್ಕಾರಿ ಪ್ರೌಢಶಾಲೆ, ಹಗರೆ, ಬೇಲೂರು ತಾ. ಹಾಸನ ಜಿಲ್ಲೆ
22. ಸರ್ಕಾರಿ ಪ್ರೌಢಶಾಲೆ, ಸೂಳೆಭಾವಿ, ಹುನಗುಂದ ತಾ. ಬಿಜಾಪುರ ಜಿಲ್ಲೆ
23. ಸರ್ಕಾರಿ ಸರಸ್ವತಿ ಪ್ರೌಢಶಾಲೆ, (ಹೆಣ್ಣು ಮಕ್ಕಳ) ಶಹಾಪುರ, ಬೆಳಗಾವಿ ಜಿಲ್ಲೆ
24. ಸರ್ಕಾರಿ ಪ್ರೌಢಶಾಲೆ, ಬೈಲವಾಡ, ಬೈಲಹೊಂಗಲ ತಾ. ಬೆಳಗಾಂ ಜಿಲ್ಲೆ
25. ಸರ್ಕಾರಿ ಪ್ರೌಢಶಾಲೆ, ಮಳಗಿ, ಮುಂಡಗೋಳ ತಾ. ಉತ್ತರ ಕನ್ನಡ ಜಿಲ್ಲೆ
26. ಸರ್ಕಾರಿ ಪ್ರೌಢಶಾಲೆ, ಅಳ್ಳಂಕಿ, ಹೊನ್ನಾವರ ತಾ. ಉತ್ತರ ಕನ್ನಡ ಜಿಲ್ಲೆ
27. ಸರ್ಕಾರಿ ಪ್ರೌಢಶಾಲೆ, ಕುಣಿಮೆಳ್ಳಿಹಳ್ಳಿ, ಸವಣೂರು ತಾ. ಧಾರವಾಡ ಜಿಲ್ಲೆ
28. ಸರ್ಕಾರಿ ಪ್ರೌಢಶಾಲೆ, ಕರ್ಜಗಿ, ಹಾವೇರಿ ತಾ. ಧಾರವಾಡ ಜಿಲ್ಲೆ
29. ಸರ್ಕಾರಿ ಪ್ರೌಢಶಾಲೆ, ನಾಗಠಾಣ, ಇಂಡಿ ತಾ. ಬಿಜಾಪುರ ಜಿಲ್ಲೆ
30. ಸರ್ಕಾರಿ ಪ್ರೌಢಶಾಲೆ, ದೊಡ್ಡ ಹರಿಜನವಾಡ, ಗಾಜಿಗಾರ ಪೇಟೆ, ರಾಯಚೂರು ಜಿಲ್ಲೆ
31. ಸರ್ಕಾರಿ ಪ್ರೌಢಶಾಲೆ, ಭಾಗ್ಯನಗರ, ಕೊಪ್ಪಳ ತಾ. ರಾಯಚೂರು ಜಿಲ್ಲೆ
32. ಸರ್ಕಾರಿ ಪ್ರೌಢಶಾಲೆ, ನಗಲೂರು, ಸುರಪುರ ತಾ. ಗುಲ್ಬರ್ಗಾ ಜಿಲ್ಲೆ
33. ಸರ್ಕಾರಿ ಪ್ರೌಢಶಾಲೆ, ಕೋಗಳಿ, ಹಗರಿಬೊಮ್ಮನಹಳ್ಳಿ ತಾ. ಬಳ್ಳಾರಿ ಜಿಲ್ಲೆ
34. ಸರ್ಕಾರಿ ಪ್ರೌಢಶಾಲೆ, ಸಿರಿಗೆರೆ, ಸಿರಿಗುಪ್ಪ ತಾ. ಬಳ್ಳಾರಿ ಜಿಲ್ಲೆ

35. ಸರ್ಕಾರಿ ಪ್ರೌಢಶಾಲೆ, (ಬಾಲಿಕಾ) ಶಿಕಾರಿಪುರ ತಾ. ಶಿವಮೊಗ್ಗ ಜಿಲ್ಲೆ
36. ಸರ್ಕಾರಿ ಪ್ರೌಢಶಾಲೆ, ದೊಡ್ಡತೇಕಲವಟ್ಟಿ, ಹೊಸದುರ್ಗ ತಾ. ಚಿತ್ರದುರ್ಗ ಜಿಲ್ಲೆ
37. ಸರ್ಕಾರಿ ಪ್ರೌಢಶಾಲೆ, ಶಿಂಗ್ರಿಹಳ್ಳಿ, ಹರಪನಹಳ್ಳಿ ತಾ. ಬಳ್ಳಾರಿ ಜಿಲ್ಲೆ
38. ಸರ್ಕಾರಿ ಪ್ರೌಢಶಾಲೆ, ಭಕ್ತರಹಳ್ಳಿ, ಕುಣಿಗಲ್ ತಾ. ತುಮಕೂರು ಜಿಲ್ಲೆ
39. ಸರ್ಕಾರಿ ಪ್ರೌಢಶಾಲೆ, ಚಕ್ಕೆರೆ ಮಾಳೂರು ಹೋಬಳಿ, ಚನ್ನಪಟ್ಟಣ ಕ್ಷೇತ್ರ ಬೆಂಗಳೂರು ಗ್ರಾಮಾಂತರ ಜಿಲ್ಲೆ
40. ಸರ್ಕಾರಿ ಪ್ರೌಢಶಾಲೆ, ಯಡೂರು - ಹುಳಗೂಡು, ಹೊಸನಗರ ತಾ. ಶಿವಮೊಗ್ಗ ಜಿಲ್ಲೆ
41. ಸರ್ಕಾರಿ ಪ್ರೌಢಶಾಲೆ, ಗೌರಿಬಿದನೂರು, ಕೋಲಾರ ಜಿಲ್ಲೆ
42. ಸರ್ಕಾರಿ ಪ್ರೌಢಶಾಲೆ, ಕದಡಿ, ಗದಗ ತಾ. ಧಾರವಾಡ ಜಿಲ್ಲೆ
43. ಸರ್ಕಾರಿ ಪ್ರೌಢಶಾಲೆ, ದುತ್ತರಗಾಂವ್, ಆಳಂದ ತಾ. ಗುಲ್ಬರ್ಗಾ ಜಿಲ್ಲೆ
44. ಸರ್ಕಾರಿ ಪ್ರೌಢಶಾಲೆ, ಕ್ಯಾಲನೂರು, ಕೋಲಾರ ತಾಲ್ಲೂಕು
45. ಸರ್ಕಾರಿ ಪ್ರೌಢಶಾಲೆ, ಐಗೂರು, ಸೋಮವಾರ ಪೇಟೆ
46. ಸರ್ಕಾರಿ ಪ್ರೌಢಶಾಲೆ, ಕೂಟಗಲ್ಲು, ರಾಮನಗರ ತಾಲ್ಲೂಕು
47. ಸರ್ಕಾರಿ ಪ್ರೌಢಶಾಲೆ, ಸಿದ್ದರಾಮನಗುಂಡಿ, ಮೈಸೂರು ಜಿಲ್ಲೆ
48. ಸರ್ಕಾರಿ ಪ್ರೌಢಶಾಲೆ, ಮಂಕಾಳ, ಬಸವಕಲ್ಯಾಣ ಕ್ಷೇತ್ರ, ಬೀದರ್ ಜಿಲ್ಲೆ
49. ಸರ್ಕಾರಿ ಪ್ರೌಢಶಾಲೆ, ಹಿಂತಾಕಿ, ಔರಾದ್ ತಾಲ್ಲೂಕು ಬೀದರ್ ಜಿಲ್ಲೆ
50. ಸರ್ಕಾರಿ ಪ್ರೌಢಶಾಲೆ, ಕಲ್ಲಸಾಗರಹಳ್ಳಿ, ಕನಕಟ್ಟಿ ಹೋಬಳಿ, ಅರಸೀಕೆರೆ ತಾಲ್ಲೂಕು
51. ಸರ್ಕಾರಿ ಪ್ರೌಢಶಾಲೆ, ಮರವರ, ಮಧುಗಿರಿ ತಾಲ್ಲೂಕು
52. ಸರ್ಕಾರಿ ಪ್ರೌಢಶಾಲೆ, ಲೊಕ್ಕನಹಳ್ಳಿ, ಕೊಳ್ಳೆಗಾಲ ತಾ. ಮೈಸೂರು ಜಿಲ್ಲೆ
53. ಸರ್ಕಾರಿ ಪ್ರೌಢಶಾಲೆ, ಅಹಿರಸಂಸ, ಬಿಜಾಪುರ ಜಿಲ್ಲೆ
54. ಸರ್ಕಾರಿ ಪ್ರೌಢಶಾಲೆ, ಜೆ.ಸಿ. ಪುರ, ಅರಸೀಕೆರೆ ತಾ. ಹಾಸನ ಜಿಲ್ಲೆ
55. ಸರ್ಕಾರಿ ಪ್ರೌಢಶಾಲೆ, ಕಾಶಿಪುರ, ಹೊಳಲ್ಕೆರೆ ತಾ. ಚಿತ್ರದುರ್ಗ ಜಿಲ್ಲೆ
56. ಸರ್ಕಾರಿ ಪ್ರೌಢಶಾಲೆ, ಎಂ.ಎಸ್.ಕೆ. ಮಿಲ್, ಜೀಲಾನಾಬಾದ್, ಗುಲ್ಬರ್ಗಾ
57. ಸರ್ಕಾರಿ ಪ್ರೌಢಶಾಲೆ, ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ
58. ಸರ್ಕಾರಿ ಪ್ರೌಢಶಾಲೆ, ಹೆಡಿಯಾಲಗ್ರಾಮ, ನಂಜನಗೂಡು ತಾ. ಮೈಸೂರು ಜಿಲ್ಲೆ
59. ಸರ್ಕಾರಿ ಪ್ರೌಢಶಾಲೆ, ಉರುಬಿನಹಟ್ಟಿ, ಗೋಕಾಕ್ ತಾ. ಬೆಳಗಾಂ ಜಿಲ್ಲೆ
60. ಸರ್ಕಾರಿ ಪ್ರೌಢಶಾಲೆ, ಪಡವಲ ಹಿಪ್ಪೆ, ಹೊಳೆನರಸೀಪುರ ತಾ. ಹಾಸನ ಜಿಲ್ಲೆ

ಶ್ರೀ ಯು.ಬಿ. ಬಣಕಾರ್:- ಸಭಾಧ್ಯಕ್ಷರೆ, ನಾನು ಹಿರೇಕೆರೂರು ತಾಲ್ಲೂಕು ಕಡೂರು ಗ್ರಾಮಕ್ಕೆ ಪದವಿಪೂರ್ವ ಕಾಲೇಜು ಸ್ಥಾಪನೆಗಾಗಿ ಮಾನ್ಯ ಸಚಿವರಲ್ಲಿ ವಿನಂತಿಸಿದ್ದೆ. ಆ ಪ್ರಕಾರ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ನನ್ನ ಹಿರೇಕೆರೂರು ಮತಕ್ಷೇತ್ರದಲ್ಲಿ ಒಂದೂ ಸರ್ಕಾರಿ ಜೂನಿಯರ್ ಕಾಲೇಜು ಇಲ್ಲ. ಆದ್ದರಿಂದ ದಯವಿಟ್ಟು ಮುಂದಿನಸಾರಿ ಕೊಡುವಂತೆ ನಿರ್ದಿಷ್ಟವಾಗಿ ಮಾನ್ಯ ಸಚಿವರಿಗೆ ತಾವು ಹೇಳಬೇಕು. ಹಾಗೂ ಕಳೆದವರ್ಷ 60 ಸರ್ಕಾರಿ ಪ್ರೌಢಶಾಲೆಗಳನ್ನು ಸರ್ಕಾರದವರು ಕೊಟ್ಟಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಅಧ್ಯಕ್ಷರೇ....

ಅಧ್ಯಕ್ಷರು:- ದಯವಿಟ್ಟು ತಾವು ಕ್ವೊಶ್ಚನ್ ಓದಿ. ಇದು ಹಿರೇಕೆರೂರು ತಾಲ್ಲೂಕಿಗೆ ಸಂಬಂಧಪಟ್ಟಿದ್ದುದು. ನೀವು ಚಿಕ್ಕಮಗಳೂರಿನವರು. ಆದ್ದರಿಂದ ತಾವು ದಯಮಾಡಿ ಕುಳಿತುಕೊಳ್ಳಿ. ತಾವು ಮಂತ್ರಿಗಳಾಗಿದ್ದವರು ಹೀಗೆ ಮಾಡಿದರೆ ಹೇಗೆ?

ಶ್ರೀ ಯು.ಬಿ. ಬಣಕಾರ್:- ಸರ್ಕಾರ ಕಳೆದ ವರ್ಷ 60 ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಿದೆ. ಆದರೆ ಅದರಲ್ಲಿ ಉತ್ತರ ಕರ್ನಾಟಕಕ್ಕೆ ಕೇವಲ 21 ಕೊಡಲಾಗಿದೆ. ಸ್ವಾತಂತ್ರ್ಯ ಬಂದಾಗಿನಿಂದ 1154 ಪ್ರೌಢಶಾಲೆಗಳನ್ನು ಹಳೇ ಮೈಸೂರು ಭಾಗದಲ್ಲಿ ಕೊಟ್ಟಿದ್ದರೆ ಉತ್ತರ ಕರ್ನಾಟಕ ಭಾಗದಲ್ಲಿ 732 ಕೊಟ್ಟಿದ್ದಾರೆ. ಆದೇ ಸಂಪ್ರದಾಯವನ್ನು ಹೋದಸಾರಿಯೂ ಸರ್ಕಾರ ಮುಂದುವರೆಸಿದೆ. ಈ ರೀತಿ ಅದು ಬೇರೆ ಇದು ಬೇರೆ ಎಂದು ಪರಿಗಣಿಸಬಾರದು; ಪ್ರಾದೇಶಿಕ ಅಸಮಾನತೆ ಮಾಡಬಾರದು. ಈ ರಾಜ್ಯದಲ್ಲಿ ಎಲ್ಲರೂ ಒಂದೇ ಎಂದು ಪರಿಗಣಿಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೆ, ಕಳೆದಸಾರಿ ಎಷ್ಟು ಪದವಿಪೂರ್ವ ಕಾಲೇಜನ್ನು ಕೊಟ್ಟಿದ್ದೇವೆ ಎಂಬ ಬಗ್ಗೆ ಅಂಕಿಅಂಶ ಕೊಟ್ಟಿದ್ದೇವೆ. ನನ್ನ ಸ್ನೇಹಿತರು ಅನೇಕ ಸಾರಿ ನನ್ನ ಹತ್ತಿರ ಕೇಳಿದ್ದಾರೆ. 1996-97ನೇ ಸಾಲಿಗೆ ಕಡೂರು ಗ್ರಾಮಕ್ಕೆ ಪದವಿಪೂರ್ವ ಕಾಲೇಜು ಕೊಡಬೇಕೆಂದು ಕೇಳಿದ್ದಾರೆ. ಅದರ ಬಗ್ಗೆ ಈಗಾಗಲೇ ವರದಿಯನ್ನು ತರಿಸಿದ್ದೇವೆ. ಈ ವರ್ಷಕ್ಕೆ 1996-97ನೇ ಸಾಲಿಗೆ ಕೊಡುವುದಕ್ಕಾಗುವುದಿಲ್ಲ. 1997-98ನೇ ಸಾಲಿನಲ್ಲಿ ಹೊಸ ಕಾಲೇಜುಗಳನ್ನು ಕೊಡುವ ಅವಕಾಶವನ್ನು ಸರ್ಕಾರ ಒದಗಿಸಿಕೊಟ್ಟಾಗ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಆಮೇಲೆ ಸ್ನೇಹಿತರಾದ ಸಗೀರ್ ಅಹಮದ್ ಅವರು ಕಡೂರು ಚಿಕ್ಕಮಗಳೂರು ಜಿಲ್ಲೆ ಎಂದು ತಿಳಿದುಕೊಂಡು ಕೇಳಿದ್ದಾರೆ. ಆ ಕಡೂರು ಅಲ್ಲ. ಇದು ಬೇರೆ.

ಶ್ರೀ ಯು.ಬಿ. ಬಣಕಾರ್:- 60 ಪ್ರೌಢಶಾಲೆಗಳನ್ನು ಕೊಟ್ಟಾಗ ನಮಗೆ ಕೇವಲ 20 ಕೊಟ್ಟು ಹಳೇ ಮೈಸೂರು ಭಾಗಕ್ಕೆ 40 ಕೊಟ್ಟಿದ್ದಾರೆ. ದಯವಿಟ್ಟು ಆ ಸಂಪ್ರದಾಯ ಮುಂದುವರೆಸಬಾರದು ಎಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು:- ಈ ಸಾರಿ ಹೆಚ್ಚು ಮಾಡಿಸೋಣ. ಈ ಸಲ ಉತ್ತರ ಕರ್ನಾಟಕಕ್ಕೆ ಜಾಸ್ತಿ ಮಾಡಿ, ಹಳೇ ಮೈಸೂರಿಗೆ ಕಡಿಮೆ ಮಾಡಿ ಆಷ್ಟೆ.

ಡಾ: ಎಂ.ಪಿ. ಕರ್ಕಿ:- ಅದನ್ನು ಮಂತ್ರಿಗಳು ಹೇಳಬೇಕು. ಅವರು ಒಪ್ಪಿಕೊಳ್ಳಲಿಲ್ಲ.

ಶ್ರೀ ಡಿ.ಆರ್. ಪಾಟೀಲ್:- ತಾವು ಹೇಳಿದ್ದನ್ನು ಮಂತ್ರಿಗಳು ಹೇಳಬೇಕು.

ಅಧ್ಯಕ್ಷರು:- ಮಾನ್ಯ ಗೋವಿಂದೇಗೌಡರೇ, ಮಾನ್ಯ ಸದಸ್ಯರಾದ ಬಣಕಾರ್ ಅವರು ಒಂದು ಸಲಹೆಯನ್ನು ಕೊಟ್ಟರು. ಹೋದವರ್ಷ ಹೊಸ ಪ್ರೌಢಶಾಲೆಗಳನ್ನು ಕೊಟ್ಟಾಗ ಉತ್ತರ ಕರ್ನಾಟಕ ಅಲಕ್ಷ್ಯಕ್ಕೊಳಗಾಗಿದೆ, ಹೆಚ್ಚು ಭಾಗವನ್ನು ಹಳೇ ಮೈಸೂರು ಪ್ರಾಂತ್ಯದಲ್ಲಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಈ ಸಾರಿ ಆ ಕಡೆಗೆ ಹೆಚ್ಚು ಕೊಡಿಸೋಣ ಎಂದು ಹೇಳಿದ್ದೇನೆ. ಆಯಿತು ಎಂದು ತಾವು ಹೇಳಿ. ಯಾವುದಾದರೂ ಭಾಗ ಅಲಕ್ಷ್ಯಕ್ಕೊಳಗಾಗಿದ್ದರೆ ಆ ಭಾಗಕ್ಕೆ ಹೆಚ್ಚು ಲಕ್ಷ್ಯ ಕೊಡುತ್ತೇವೆಂದು ಹೇಳಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಪ್ರೌಢಶಾಲೆ ಬಗ್ಗೆ ಅವರಿಗೆ ಹೇಳುವುದಾದರೆ ಪಕ್ಷಾತೀತವಾಗಿ ಎಲ್ಲಾ ಪಕ್ಷದ ಶಾಸಕರಿಗೆ ಒಂದೊಂದು ಪ್ರೌಢಶಾಲೆಗಳನ್ನು ಕೊಡುವ ನಿರ್ಧಾರ ತೆಗೆದುಕೊಂಡಿದ್ದೇವೆ. ಪದವಿಪೂರ್ವ ಕಾಲೇಜನ್ನು ಕೊಡುವಾಗ ಭಿನ್ನಬೇಧ ಮಾಡುತ್ತಿಲ್ಲ.

ಶ್ರೀ ಡಿ.ಆರ್. ಪಾಟೀಲ್:- ಅಧ್ಯಕ್ಷರೆ, ಅವರ ಉತ್ತರದಿಂದ ತಮಗೆ ಸಮಾಧಾನವಾಗಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು:- ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಯು.ಬಿ. ಬಣಕಾರ್:- ಉತ್ತರ ಕರ್ನಾಟಕಕ್ಕೆ ಅವಶ್ಯಕತೆ ಇಲ್ಲವೆ?

ಅಧ್ಯಕ್ಷರು:- ಅವಶ್ಯಕತೆ ಇದ್ದ ಕಡೆ ಕೊಡುತ್ತೇವೆ ಎಂದರೆ ನಿಮ್ಮ ಭಾಗದಲ್ಲಿ ಅವಶ್ಯಕತೆ ಇದ್ದರೆ ಕೊಡುತ್ತಾರೆ.

ಶ್ರೀ ಡಿ.ಆರ್. ಪಾಟೀಲ್:- ತಾವು ಹೇಳಿದ್ದನ್ನು ಅವರ ಬಾಯಿಯಿಂದ ಹೇಳಿಸಿ. ಇಲ್ಲದಿದ್ದರೆ ನಮಗೆ ಅನ್ಯಾಯವಾಗುತ್ತದೆ.

ಅಧ್ಯಕ್ಷರು:- ನನ್ನ ಮೇಲೂ ಸ್ವಲ್ಪ ದಯೆ ಇರಬೇಕು. ಈ ಕಡೆಯವರು ನಿನ್ನೆಯಿಂದ ಬಹಳ ಜೋರಾಗಿದ್ದೀರಿ.

ಶ್ರೀ ಮಂಜುನಾಥ ಸಿ. ಕುನ್ನೂರ್:- ಉತ್ತರ ಕರ್ನಾಟಕಕ್ಕಾದರೆ ಬಹಳ ಒಳ್ಳೆಯದು.

ಅಧ್ಯಕ್ಷರು:- ನೀವೂ ಎದ್ದುಬಿಟ್ಟಿರಾ? ನಿಮ್ಮದೇನು ಎಂಬುದು ಗೊತ್ತಿದೆ.

ಶ್ರೀ ಡಿ.ಆರ್. ಪಾಟೀಲ್:- ಸಾರ್, ದಯವಿಟ್ಟು ಅವರ ಕಡೆಯಿಂದ ಹೇಳಿಸಿ.

ಅಧ್ಯಕ್ಷರು:- ನಿಮಗೆ ಗೊತ್ತಿದೆ ಅವರ ಸ್ವಭಾವ ಎಂಥದ್ದು ಎಂದು. ಈ ರೀತಿ ಉಪಚಾರಕ್ಕೆ ಹೇಳುವ ಮಂತ್ರಿ ಅಲ್ಲ ಗೋವಿಂದೇಗೌಡರು. ಅವರು ಬಹಳ ಪ್ರಾಮಾಣಿಕ ವ್ಯಕ್ತಿ.

ಶ್ರೀ ಡಿ.ಆರ್. ಪಾಟೀಲ್:- ಸಾರ್, ಅವರ ಗಮನಕ್ಕೆ ಬಂದರೆ ನಮಗೆ ಅನ್ಯಾಯವಾಗುವುದಿಲ್ಲ ಎಂಬುದು ನಮಗೆ ಗೊತ್ತಿದೆ. ಈಗ ಅವರ ಗಮನಕ್ಕೆ ತಂದಿದ್ದೇವೆ.

ಅಧ್ಯಕ್ಷರು:- ಆ ಜವಾಬ್ದಾರಿ ನನಗೆ ಬಿಡಿ. ಈ ಸಾರಿ ಮಾಡುವಾಗ ನಾನು, ನೀವು ಎಲ್ಲಾ ಕುಳಿತರೆ....

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ಎಷ್ಟು ಪಾತ್ರ ತಾವು ಮಾಡುವುದು? ಎಷ್ಟು ಅವತಾರ ಮಾಡುತ್ತೀರಿ? ಒಂದು ಪಾತ್ರ ಸರಿ.

ಶ್ರೀ ಡಿ.ಆರ್. ಪಾಟೀಲ್:- ಪ್ರಾದೇಶಿಕ ಅಸಮಾನತೆ ಪ್ರಶ್ನೆಗೆ ಸ್ಪಂದನ ಮಾಡಿದ್ದೀರಿ. ಮಂತ್ರಿಗಳ ಕಡೆಯಿಂದ ಸ್ಪಂದನ ಮಾಡಿಸಿ ಅಷ್ಟೆ.

ಅಧ್ಯಕ್ಷರು:- ಜವಾಬ್ದಾರಿ ನಾನು ತೆಗೆದುಕೊಂಡಿದ್ದೇನೆ. ಅಧ್ಯಕ್ಷನಾಗಿ ಈ ವಿಚಾರದಲ್ಲಿ ನಾನೇ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇನೆ. ನನ್ನನ್ನು ನಂಬಬೇಕು ನೀವು.

ಶ್ರೀ ಸಿ.ಆರ್. ಸಗೀರ್ ಅಹಮದ್:- ಸರ್ಕಾರದ ನೀತಿ ಪ್ರಕಾರ ಅಗತ್ಯವಿರುವ ಕಡೆ ಪ್ರೌಢಶಾಲೆಗಳನ್ನು ಪ್ರಾರಂಭ ಮಾಡುತ್ತೇವೆಂದು ನೇರವಾಗಿ ಹಿಂದಿನ ಬಜೆಟ್ ಭಾಷಣದಲ್ಲಿ ಸರ್ಕಾರದವರು ಹೇಳಿದ್ದರು. ಇವತ್ತು ಮತ್ತೆ ಹೇಳಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಗತ್ಯವಾಗಿ ಬೇಡಿಕೆ ಇದ್ದ ಜಾಗದಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭ ಮಾಡಿಲ್ಲ. ಅವರ ಕ್ಷೇತ್ರದಲ್ಲೇ ಮಂತ್ರಿಗಳು ಎರಡು ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. ಬೇಕಾದರೆ ದಾಖಲಾತಿಗಳನ್ನು ಕೊಡುತ್ತೇನೆ ಇದು ಅವರ ನೀತಿಯೇ ಎಂಬುದು ಪ್ರಶ್ನೆ. ತಾರತಮ್ಯ ಆಗಿಲ್ಲ ಅಂದರೆ ಇದು ತಾರತಮ್ಯ ಅಲ್ಲವೆ? ಒಂದೇ ಕ್ಷೇತ್ರದಲ್ಲಿ ಎರಡು ಪ್ರೌಢಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ. ಹಾಗಾದರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಬೇರೆ ಕಡೆಯಿಂದ ಬೇಡಿಕೆ ಬಂದಿಲ್ಲವೇ?

ಅಧ್ಯಕ್ಷರು:- ಇಷ್ಟೆಲ್ಲಾ ರಾಜ್ಯ ನಡೆಸುವಾಗ ಒಂದೆರಡು ಹೆಚ್ಚು ಕಡಿಮೆ ಆಗಿರಬಹುದು. ನೋಡುತ್ತಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ತಾವು ಮಂತ್ರಿಯಾಗಿ ಕೆಲಸ ಮಾಡಿದ್ದೀರಿ, ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದ್ದೀರಿ. ನಾನು ಮಂತ್ರಿಯಾಗಿದ್ದಾಗ ಈ ರೀತಿ ತಾರತಮ್ಯ ಮಾಡಿಲ್ಲ ಸಾರ್. ಆದ್ದರಿಂದ ದಯವಾಡಿ ಅಗತ್ಯವಿರುವ ಕಡೆ ಪರಿಶೀಲಿಸಿ ಪ್ರಾರಂಭ ಮಾಡುವಂತೆ ಉತ್ತರವನ್ನು ತಮ್ಮ ಮೂಲಕ ಕೊಡಬೇಕೆಂದು ಬಯಸುತ್ತೇನೆ.

ಅಧ್ಯಕ್ಷರು:- ಅದೇನೋ ತಾರತಮ್ಯ ಅಂತೆ; ನನಗೆ ಗೊತ್ತಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್:- ತಾರತಮ್ಯ ಬೇರೆ. ತಾರ ಬೇರೆ ತಮ್ಮ ಬೇರೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಸಗೀರ್ ಅಹಮದ್ ಸಾಹೇಬರು ಅವರ ಕ್ಷೇತ್ರಕ್ಕೆ ಹೈಸ್ಕೂಲ್ ಕೊಟ್ಟಿಲ್ಲ ಎಂದರೆ ಹೇಳಲಿ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಅವರ ಕ್ಷೇತ್ರಕ್ಕೆ ಕೊಟ್ಟಿದ್ದೇನೋ ಇಲ್ಲವೋ ಎಂಬ ಬಗ್ಗೆ ಅವರು ಆತ್ಮಶೋಧನೆ ಮಾಡಿಕೊಳ್ಳಲಿ. ಇದರಲ್ಲಿ ತಾರತಮ್ಯದ ಪ್ರಶ್ನೆ ಇಲ್ಲ. ಅವಶ್ಯಕತೆ ಎಲ್ಲಿದೆ ಅಲ್ಲಿ ನೋಡಿ ಕೊಡುವುದನ್ನು ನಾವು ಮಾಡಿದ್ದೇವೆ.